ಇ) ಒಂದು ತಿಂಗಳು ತಡವಾಗಿ ತೆರೆಯುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ;

ಈ) ಶಾಲೆಗಳು ಪ್ರಾರಂಭವಾಗುವ ದಿನವೇ ವಿದ್ಯಾರ್ಥಿನಿಲಯಗಳನ್ನು ತೆರೆಯುವಲ್ಲಿ ಸರ್ಕಾರದ ನೀಲುವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಹೌದು. ಮೆಟ್ರಿಕ್-ಪೂರ್ವ ಶಾಲೆಗಳು ಜೂನ್ ತಿಂಗಳಲ್ಲಿ ಪ್ರಾರಂಭವಾಗುತ್ತವೆ.

ಆ) ಶಾಲೆಗಳು ಪ್ರಾರಂಭವಾದ ದಿನದಿಂದಲೇ ಇಲಾಖೆಯ ನಿರ್ದೇಶನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ತೆರೆಯಲಾಗುತ್ತದೆ. ಹೊಸ ವಿದ್ಯಾರ್ಥಿಗಳ ಅರ್ಜಿಗಳನ್ನು ಹಾಸ್ಟೆಲ್ ಆಯ್ಕೆ ಸಮಿತಿಯಿಂದ ಪರಿಶೀಲಿಸಿ ಆಯ್ಕೆ ಮಾಡಿದ ನಂತರ ವಿದ್ಯಾರ್ಥಿ ನಿಲಯಕ್ಕೆ ತಕ್ಷಣ ಪ್ರವೇಶ ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಶಾಲೆಗಳು ಪ್ರಾರಂಭವಾಗುವ ದಿನವೇ ವಿದ್ಯಾರ್ಥಿ ನಿಲಯಗಳನ್ನು ತೆರೆಯುವುದೇ ಸರ್ಕಾರದ ನಿಲುವು.

ಗ್ರಾಮೀಣ ಅಭಿವೃದ್ಧಿ ಯೋಜನೆ.

3356(4409) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಂಬೇಡ್ಕರ್ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಗೆ 1999-2000ನೇ ಸಾಲಿಗೆ ಸರ್ಕಾರ ನಿಗಧಿಪಡಿಸಿರುವ ಹಣ ಎಷ್ಟು ;

ಆ) ಇದರಲ್ಲಿ ಖರ್ಚಾಗಿರುವ ಹಣ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಯೋಜನೆಯಡಿಯಲ್ಲಿ ನೀಡಲಾಗುವ ಸೌಲಭ್ಯಗಳು ಯಾವುವು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1999-2000 ನೇ ಸಾಲಿಗೆ ಅಂಬೇಡ್ಕರ್ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನಕ್ಕಾಗಿ ಸರ್ಕಾರವು ರೂ.440.55 ಲಕ್ಷ ರೂ.ಗಳನ್ನು ನಿಗದಿಪಡಿಸಿದೆ.

ಅ) ಈ ಯೋಜನೆಯು ಅನುಷ್ಠಾನ ಹಂತದಲ್ಲಿರುತ್ತದೆ. ಹಣ ಬಿಡುಗಡೆ ಮಾಡಿದ ತಾಲ್ಲೂಕು ವಿವರವನ್ನು ಅನುಬಂಧ 'ಅ'ದಲ್ಲಿ ತೋರಿಸಲಾಗಿದೆ.

ಆ) ಅಂಬೇಡ್ಕರ್ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಗ್ರಾಮಗಳನ್ನು ಅಭಿವೃದ್ಧಿ ಆಯ್ಕೆಯಾದ ಗ್ರಾಮದಲ್ಲಿ, ಈ ಕೆಳಕಂಡ ಪ್ರಮುಖ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

1) ವಸತಿ ಯೋಜನೆ
2) ಕಿರು ನೀರು ಪೂರೈಕೆ ಯೋಜನೆ
3) ಕಡಿಮೆ ವೆಚ್ಚದ ನೈರ್ಮಲೀಕರಣ ವ್ಯವಸ್ಥೆ ಮತ್ತ ಒಳಚರಂಡಿ ವ್ಯವಸ್ಥೆ
4) ಸಮುದಾಯ ಭವನ ಯೋಜನೆ
5) ವಿದ್ಯುದ್ದೀಕರಣ ಯೋಜನೆ
6) ಸಂಪರ್ಕ ರಸ್ತೆ ನಿರ್ಮಾಣ

ಇದಲ್ಲದೆ ಈ ಯೋಜನೆಯಡಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿದ ಗ್ರಾಮಗಳಲ್ಲಿ ಮೇಲಿನ ಪ್ರಮುಖ ಕಾಮಗಾರಿಗಳ ಜೊತೆಗೆ ಗ್ರಾಮದ ಸರ್ವೋತ್ತಮ ಬೆಳವಣಿಗೆ ಅನುಕೂಲವಾಗುವಂತಹ ಇತರೆ ಕಾಮಗಾರಿಗಳನ್ನು ಈ ಕಾರ್ಯಕ್ರಮಗಳಲ್ಲಿ, ಉಳಿತಾಯವಾಗಬಹುದಾದ ಹಣದಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಸಹ ನೀಡಲಾಗುತ್ತಿದೆ.

1) ಶಾಲಾ ಕಟ್ಟಡ
2) ಆಸ್ಪತ್ರೆ ಕಟ್ಟಡ
3) ವರ್ಕ್ ಕಂ ಪ್ರೊಪಕ್ಷನ್ ಸೆಂಟರ್ ಕಟ್ಟಡ
4) ಪರಿಶಿಷ್ಟ ಜಾತಿಯವರಿಗೆ ವಸತಿ ಶಾಲಾ ಕಟ್ಟಡ
5) ಪರಿಶಿಷ್ಟ ಜಾತಿಯವರ ವಿದ್ಯಾರ್ಥಿನಿಲಯಗಳ ಕಟ್ಟಡ

ಅನುಬಂಧ - ಅ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು, ತಾಲ್ಲೂಕು ಮತ್ತು ಆಯ್ಕೆಯಾದ ಗ್ರಾಮದ ಹೆಸರು	ನಿಗದಿಪಡಿಸಿದ ಹಣ	ಬಿಡುಗಡೆ ಮಾಡಲಾದ ಹಣ
1	2	3	4
1.	ಬೆಂಗಳೂರು (ನಗರ)	16.50	—
2.	ಬೆಂಗಳೂರು (ಗ್ರಾ)	16.50	—

1	2	3	4
3.	ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾ: ಚಿಕ್ಕೇರಹಳ್ಳಿ ಗ್ರಾಮ	16.50	16.50
4.	ದಾವಣಗೆರೆಯ ಜಿಲ್ಲೆಯ, ಕಕ್ಕರಗೊಳ್ಳ ಗ್ರಾಮ	16.50	16.50
5.	ಕೋಲಾರ ಜಿಲ್ಲೆ	16.50	—
6.	ತುಮಕೂರು ಜಿಲ್ಲೆ	16.50	—
7.	ಶಿವಮೊಗ್ಗ ಜಿಲ್ಲೆಯ ಸಾಗರ ತಾ: ಹಿರೇಬಲಗುಂಜಿ	16.50	16.50
8.	ಮೈಸೂರು ಜಿಲ್ಲೆಯ ಟಿ.ನರಸೀಪುರ ತಾ: ಎಡದೊರೆ ಗ್ರಾಮ	16.50	10.00
9.	ಚಾಮರಾಜನಗರ ಜಿಲ್ಲೆ	16.50	—
10.	ಮಂಡ್ಯ ಜಿಲ್ಲೆಯ ಮದ್ದೂರು ತಾ: ಕಣಿವಾ ಹೋಬಳಿ, ಚಾಮನಹಳ್ಳಿ ಗ್ರಾಮ	16.50	16.50
11.	ಹಾಸನ ಜಿಲ್ಲೆಯ ಬೇಲೂರು ತಾ: ಮದಗಚ್ಚಿ ಗ್ರಾಮ	16.50	10.00
12.	ಚಿಕ್ಕಮಗಳೂರು ಜಿಲ್ಲೆ	16.50	—
13.	ಕೊಡಗು ಜಿಲ್ಲೆಯ ಚೆನ್ನಯ್ಯನ ಗ್ರಾಮ	16.50	9.00
14.	ದಕ್ಷಿಣ ಕನ್ನಡ ಜಿಲ್ಲೆ	16.50	—
15.	ಉಡುಪಿ ಜಿಲ್ಲೆಯ ಕುಂದಾಪುರ ತಾ: ಅಂಪಾರು ಗ್ರಾಮ, ತಲೆಕಲ್‌ಗುಡ್ಡೆ	16.50	9.28
16.	ಬೆಳಗಾಂ ಜಿಲ್ಲೆ	16.50	—
17.	ಬಿಜಾಪುರ ಜಿಲ್ಲೆಯ ಬಿಜಾಪುರ ತಾ: ಹೆಗಡಿಹಾಳ ಗ್ರಾಮ	16.50	16.50
18.	ಬಾಗಲಕೋಟೆ ಜಿಲ್ಲೆಯ, ಮುಧೋಳ ತಾ: ಬೆಳಗಲಿ ಗ್ರಾಮ	16.50	16.50
19.	ಧಾರವಾಡ ಜಿಲ್ಲೆಯ ಕುಂದಗೋಳ ತಾ: ಗಾಡಗೇರಿ ಗ್ರಾಮ	16.50	16.50
20.	ಗದಗ್ ಜಿಲ್ಲೆಯ ಗದಗ್ ತಾ: ಬೆಳದಡಿ ಗ್ರಾಮ	15.00	10.00
21.	ಹಾವೇರಿ ಜಿಲ್ಲೆಯ ಹಾನಗಲ್ ತಾ: ಕ್ಯಾಶನೂರು ಗ್ರಾಮ	16.50	16.50
22.	ಕಾರವಾರ ಜಿಲ್ಲೆ	16.50	—
23.	ಗುಲ್ಬರ್ಗಾ ಜಿಲ್ಲೆಯ, ಚಿತ್ತಾಪುರ ತಾ: ಹುಳಂಡಗೇರ ಗ್ರಾಮ	16.50	10.00

1	2	3	4
24.	ರಾಯಚೂರು ಜಿಲ್ಲೆಯ, ಚಿತ್ತಾಪುರ ದೇವದುರ್ಗ ತಾ: ಅಲವರ್ತಿ ಗ್ರಾಮ	16.50	10.00
25.	ಕೊಪ್ಪಳ ಜಿಲ್ಲೆ	15.50	—
26.	ಬಳ್ಳಾರಿ ಜಿಲ್ಲೆಯ, ಬಳ್ಳಾರಿ ತಾ: ಬೆಳಗಲ್ ತಾಂಡ ಗ್ರಾಮ	16.50	16.50
27.	ಬೀದರ್ ಜಿಲ್ಲೆಯ, ಭಾಲ್ಕಿ ತಾ: ಮಾಕೇಶ್ವರ ಗ್ರಾಮ	16.07	10.00
	ಒಟ್ಟು ರೂ.	440.57	228.28

ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬೂದು ಮಿಶ್ರಿತ ಫೋಷಣೆ ತೆಗೆದು ಹಾಕುವುದು.

3358(4510) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬೂದು ಮಿಶ್ರಿತ ಫೋಷಣೆ ತೆಗೆದು ಹಾಕಲು ಸರ್ವೆ ಕಾರ್ಯವನ್ನು ಪ್ರಾರಂಭಿಸುವುದಾಗಿ ಸರ್ಕಾರ ನೀಡಿದ ಆಶ್ವಾಸನೆಯಂತೆ ಈ ಕಾರ್ಯ ಯಾವ ಹಂತದಲ್ಲಿದೆ.

ಆ) ಈ ಕಾರ್ಯ ಪ್ರಾರಂಭಿಸದಿದ್ದಲ್ಲಿ ಯಾವಾಗ ಪ್ರಾರಂಬಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಈಗಾಗಲೇ ಸರ್ವೇಕಾರ್ಯ ಮುಗಿದಿದ್ದು, ವರದಿಯು ಮುಕ್ತಾಯ ಹಂತದಲ್ಲಿದೆ.

ಆ) ಸರ್ವೇ ಕಾರ್ಯವನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ.

ಸಾರ್ವಜನಿಕ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.

3359(4127) ಶ್ರೀ ಚೌಡರೆಡ್ಡಿ (ಚಿಂತಾಮಣಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರ ನಡೆಸುತ್ತಿರುವ ಸಾರ್ವಜನಿಕ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗಧಿಗೊಳಿಸಿದ್ದು, ಬೇಡಿಕೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?